# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 216/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಅನೂಪ್ ಕುಮಾರ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಮಹದೇವ.ಎ.ಸಿ | | **08.08.2024** |
| **ವಯಸ್ಸು** | ಃ **36** ವರ್ಷ | | |
| **ವೃತ್ತಿ** | ಃ ವಕೀಲರು | | **ಪ್ರಾ.ಸಾ. ಃ 03** |
| **ವಾಸಸ್ಥಳ** | ಃ ಮೈಸೂರು | | **ಚಾ.ಸಾ. ಃ 04** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ–*1* ದಯಾನಂದ ನನ್ನ ಶಡ್ಡಕನಿರುತ್ತಾನೆ. ಕೋರ್ಟ್ ಮುಂದೆ ಇರುವ ಆರೋಪಿತ ಚಾ.ಸಾ–*1* ದಯಾನಂದ ಇವರ ತಮ್ಮನಿರುತ್ತಾನೆ. ಆರೋಪಿ ಮತ್ತು ದಯಾನಂದ ಇವರು ಕೆ.ಸಿ.ಲೇಔಟ್ ನ ಡ್ಯೂಪ್ಲೆಕ್ಸ್ ಮನೆಯಲ್ಲಿ ವಾಸವಿದ್ದಾರೆ. ಆ ಮನೆಯಲ್ಲಿ ನೆಲ ಮಹಡಿಯಲ್ಲಿ ಆರೋಪಿ ಮತ್ತು ಆತನ ತಂದೆ ತಾಯಿಗಳು ವಾಸವಿದ್ದರು. ಮೊದಲ ಮಹಡಿಯಲ್ಲಿ ದಯಾನಂದ ಮತ್ತು ಆತನ ಹೆಂಡತಿ ಮಕ್ಕಳು ವಾಸವಿದ್ದರು. ಈಗ ದಯಾನಂದ ಇವರು ಬೇರೆ ಮನೆಯಲ್ಲಿ ವಾಸವಿದ್ದಾರೆ. ಆಸ್ತಿ ವಿಚಾರಕ್ಕೆ ಆರೋಪಿ ಮತ್ತು ದಯಾನಂದ ಇವರ ನಡುವೆ ಸಣ್ಣಪುಟ್ಟ ಗಲಾಟೆಯಾಗುತ್ತಿತ್ತು ಎಂದು ದಯಾನಂದ ಇವರು ಹೇಳುತ್ತಿದ್ದರು. ದಿಃ*01.03.2021* ರಂದು ರಾತ್ರಿ *11.15* ಕ್ಕೆ ದಯಾನಂದ ಇವರು ನನಗೆ ಪೋನ್ ಮಾಡಿ ನನ್ನ ತಮ್ಮ ಎಣ್ಣೆ ಚೆಲ್ಲಿದ್ದಾನೆ ಅದರಿಂದ ಗಾಯಗಳಾಗಿವೆ ಗೋಪಾಲಗೌಡ ಆಸ್ಪತ್ರೆಯಲ್ಲಿ ದಾಖಲಾಗಿದ್ದೇನೆ ಎಂದು ತಿಳಿಸಿದ್ದರಿಂದ ಆ ಕೂಡಲೇ ನಾನು ಆಸ್ಪತ್ರೆಗೆ ಹೋಗಿದ್ದೆ. ಆ ಕಾಲಕ್ಕೆ ನಾನು ಹೋಗಿ ನೋಡಿದಾಗ ದಯಾನಂದ ಇವರ ಮುಖ, ಎದೆಯ ಭಾಗ ಮತ್ತು ಕಾಲುಗಳಿಗೆ ಸುಟ್ಟ

ಗಾಯಗಳಾಗಿದ್ದವು. ನಾನು ಹೋದ ಬಳಿಕ ದಯಾನಂದ ಇವರನ್ನು ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಆ ಕಾಲಕ್ಕೆ ನಾನು ವಿಚಾರಿಸಿದಾಗ ದಯಾನಂದ ಇವರು ಆ ದಿನ ರಾತ್ರಿ 10.45 ಕ್ಕೆ ಅವರು ಮನೆಗೆ ಬಂದು ಮೆಟ್ಟಿಲು ಹತ್ತುತ್ತಿರುವಾಗ ಅವರ ತಮ್ಮ ರಘು ಲ್ಯಾಂಡಿಂಗ್ ಸ್ಥಳದಿಂದ ಬಕೆಟ್ ನಿಂದ ಎಣ್ಣೆ ಸುರಿದಿದ್ದರಿಂದ ನನಗೆ ಗಾಯಗಳಾಗಿದ್ದಾಗಿ ಹೇಳಿದ್ದರು.

2. ದಿಃ02.03.2021 ರಂದು ಪೋಲೀಸರು ಮಹಜರ್ ಗೆ ಬರುವಂತೆ ನೋಟಿಸ್ ಕೊಟ್ಟಿದ್ದರು. ಆ ಕಾಲಕ್ಕೆ ಪೋಲೀಸರು ಪಂಚರಾದ ಲೂಯಿಸ್ ಮತ್ತು ಪ್ರತಾಪ್ ಇವರ ಸಮಕ್ಷಮ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಆ ಮನೆಯಲ್ಲಿದ್ದ ಒಂದು ಬಕೆಟ್ ಮತ್ತು ಅಲ್ಲಿ ಚೆಲ್ಲಿದ್ದ ಎಣ್ಣೆಯನ್ನು ಹಾಕಿದ್ದ ಒಂದು ಡಬ್ಬಿಯನ್ನು ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ–1 ಮಹಜರ್ ಆ ಮನೆಯಲ್ಲಿ ಮಾಡಿದ್ದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ–1(ಸಿ) ಎಂದು ಗುರುತಿಸಿದೆ.

3. 03.03.2021 ರಂದು ಘಟನೆ ಕಾಲಕ್ಕೆ ದಯಾನಂದ ಇವರು ಧರಿಸಿದ್ದ ಬಟ್ಟೆಗಳನ್ನು ಆಸ್ಪತ್ರೆಯಿಂದ ಪಡೆದುಕೊಂಡು ಪೋಲೀಸ್ ಠಾಣೆಗೆ ಹೋಗಿ ಹಾಜರುಪಡಿಸಿದ್ದೆ. ಪೋಲೀಸರು ಆ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ–2 ಮಹಜರ್ ಆ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡ ಕಾಲಕ್ಕೆ ಮಾಡಿದ್ದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ–2(ಸಿ) ಎಂದು ಗುರುತಿಸಿದೆ. ನಿ.ಪಿ.2 ಮಹಜರ್ ಕಾಲಕ್ಕೂ ಲೂಯಿಸ್ ಮತ್ತು ಪ್ರತಾಪ್ ಹಾಜರಿದ್ದರು. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಎಂ.ಒ–1 ಮತ್ತು 2 ಘಟನೆ ಸ್ಥಳದಲ್ಲಿ ಮಾಡಿದ್ದ ಮಹಜರ್ ಕಾಲಕ್ಕೆ ವಶಪಡಿಸಿಕೊಂಡ

ವಸ್ತುಗಳು ಇವೆ. ಎಂ.ಒ–*3* ರಿಂದ *5* ನಾನು ಪೋಲೀಸ್ ಠಾಣೆಯಲ್ಲಿ ಹಾಜರುಪಡಿಸಿದ್ದ ಬಟ್ಟೆಗಳು ಇವೆ. ದಯಾನಂದ ಇವರಿಗೆ ಬಿಸಿ ಎಣ್ಣೆ ಚೆಲ್ಲಿದ್ದರಿಂದ ಸುಟ್ಟ ಗಾಯಗಳು ಆಗಿತ್ತು.

ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಪಿ.ಟಿ ರವರಿಂದಃ-

*4.* ದಯಾನಂದ ಮತ್ತು ಆರೋಪಿತನ ನಡುವೆ ಸಿವಿಲ್ ಪ್ರಕರಣಗಳು ಪೆಂಡಿಂಗ್ ಇದೆ ಎಂದರೆ ಆ ಬಗ್ಗೆ ದಯಾನಂದ ಇವರು ಹೇಳುತ್ತಿದ್ದರು. ದಯಾನಂದ ಇವರು ಅವರ ತಂದೆಯನ್ನು ಹೊಡೆದು ಮನೆಯಿಂದ ಹೊರಹಾಕಿದ್ದ ಬಗ್ಗೆ ನಜರ್ ಬಾದ್ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ದಯಾನಂದ ಇವರಿಗೆ ಜೆ.ಎಂ.ಎಫ್.ಸಿ ಕೋರ್ಟ್ ನಲ್ಲಿ ಶಿಕ್ಷೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಯಾನಂದ ಇವರು ಅವರ ತಂದೆಗೆ ತೊಂದರೆ ಕೊಟ್ಟಿದ್ದರಿಂದ ಅವರ ತಂದೆ ದಯಾನಂದ ಇವರು ಮನೆಗೆ ಬರಬಾರದು ಎಂದು ಆದೇಶ ಕೋರಿ ದಾವೆ ಹಾಕಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ಕೇಸ್ ನಲ್ಲಿ ದಯಾನಂದ ಇವರು ಮನೆಗೆ ಹೋಗದಂತೆ ಆದೇಶ ಇದ್ದಾಗಲೂ ದಯಾನಂದ ಇವರು ಮನೆಗೆ ಹೋಗುತ್ತಿದ್ದರು ಎಂದರೆ ಗೊತ್ತಿಲ್ಲ. ದಯಾನಂದ ಇವರು ಆ ಕೇಸ್ ಗಳ ಬಗ್ಗೆ ನನಗೆ ಹೆಚ್ಚಿಗೆ ಹೇಳುತ್ತಿರಲಿಲ್ಲ. ಗೋಪಾಲಗೌಡ ಆಸ್ಪತ್ರೆ ಮುಂಭಾಗದಲ್ಲಿ ನಜರ್ ಬಾದ್ ಪೋಲೀಸ್ ಠಾಣೆ ಇದೆ ಎಂದರೆ ನಿಜ. ನಾನು ನಜರ್ ಬಾದ್ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರಲಿಲ್ಲ. ಆ ಕಾಲಕ್ಕೆ ಎಂ.ಎಲ್.ಸಿ ಪ್ರಕರಣ ದಾಖಲಾಗಿ ಪೋಲೀಸರೇ ದಯಾನಂದ ಇವರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿದ್ದರು ಆದರೆ ನಾನು ಎಂ.ಎಲ್.ಸಿ ಕುರಿತು ದಾಖಲೆ ಪಡೆದಿಲ್ಲ. ಗೋಪಾಲಗೌಡ ಆಸ್ಪತ್ರೆಯಲ್ಲಿ ಕೇವಲ ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದರು. ನಾನೇ ದಯಾನಂದ ಇವರನ್ನು ಗೋಪಾಲಗೌಡ ಆಸ್ಪತ್ರೆಯಿಂದ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಆ ಕಾಲಕ್ಕೆ ಜೆ.ಎಸ್.ಎಸ್ ಆಸ್ಪತ್ರೆಗೆ ಸೇರಿಸುವ ಮೊದಲು ಪೋಲೀಸರಿಗೆ ತಿಳಿಸಿಲ್ಲ. ಆ ದಿನ ನಾನು ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಚೆನ್ನಾಗಿದೆ ಎಂದು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ.

ಗೋಪಾಲಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ತಿಳಿಸಿದ್ದೆವು. ಗೋಪಾಲಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಹೋದಾಗ ಆಸ್ಪತ್ರೆಯಲ್ಲಿ ದಯಾನಂದ ಇವರ ಜೊತೆ ಚಾ.ಸಾ-*5* ಸೋಮ ಹಾಜರಿದ್ದರು. ಘಟನೆ ಬಗ್ಗೆ ದಯಾನಂದ ಇವರು ಹೇಳಿದ್ದರಿಂದ ನನಗೆ ಗೊತ್ತಾಗಿದೆ. ಘಟನೆ ದಿನ ರಾತ್ರಿ ದಯಾನಂದ ಇವರು ನೋವು ನೋವು ಎಂದು ಹೇಳುತ್ತಿದುದ್ದರಿಂದ ಪೋಲೀಸರು ಪ್ರಕರಣ ದಾಖಲಿಸಿಕೊಂಡಿರಲಿಲ್ಲ. ದಯಾನಂದ ಇವರೇ ನನಗೆ ಪೋನ್ ಮಾಡಿ ವಿಷಯ ತಿಳಿಸಿದ್ದರು ಆ ಕಾಲಕ್ಕೆ ಅವರು ಸ್ವಲ್ಪ ಸ್ವಲ್ಪ ಮಾತನಾಡುತ್ತಿದ್ದರು.

*5.* ಚಾ.ಸಾ-*2* ಮತ್ತು *3* ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಚಾ.ಸಾ-*3* ನನ್ನ ಪರಿಚಯದವರು ಇರುತ್ತಾರೆ. ದಯಾನಂದ ಇವರು ಶಡ್ಡಕ ಇರುವ ಕಾರಣ ಅವರಿಗೆ ಸಹಾಯ ಮಾಡಲು ನಾನೇ ಪ್ರಕರಣವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ*02.03.2021* ರಂದು ಘಟನೆ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ದಿಃ*03.03.2021* ರಂದು ನಜರ್ ಬಾದ್ ಪೋಲೀಸ್ ಠಾಣೆಯ ಪೋಲೀಸರು ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮ ಜರುಗಿಸಲು ಬಂದಾಗ ನಾನೇ ಜಾಗ ತೋರಿಸಿರುತ್ತೇನೆ ಎಂದು ಹೇಳಿದ್ದೇನೆ ಎಂದರೆ ಅದು ಕೈ ತಪ್ಪಿನಿಂದಾಗಿ ದಿಃ*02.03.2021* ರ ಬದಲಾಗಿ ದಿಃ*03.03.2021* ಎಂದು ನಮೂದಾಗಿದೆ. ಹೇಳಿಕೆಯ ಸದರಿ ಭಾಗವನ್ನು ನಿ.ಡಿ-*1* ಎಂದು ಗುರುತಿಸಿದೆ. ದಿಃ*03.03.2021* ರಂದೇ ಸ್ಥಳ ಮಹಜರ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ದಯಾನಂದ ಇವರ ತಾಯಿಯನ್ನು ಘಟನೆ ಬಗ್ಗೆ ವಿಚಾರಿಸಿದ್ದೆ ಆ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ಆ ಕಾಲಕ್ಕೆ ದಯಾನಂದ ಇವರ ತಾಯಿ ಆ ರೀತಿ ಘಟನೆ ನಡೆದಿಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ದಯಾನಂದ ನನ್ನ ಶಡ್ಡಕ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ

ಸರಿಯಲ್ಲ. ಎಂ.ಓ *1* ಮತ್ತು *2* ಅನ್ನು ಆ ಸ್ಥಳದಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಂ.ಓ *3* ರಿಂದ *5* ಅನ್ನು ಆಸ್ಪತ್ರೆಯವರ ಮೌಖಿಕ ಅನುಮತಿ ಪಡೆದು ತೆಗೆದುಕೊಂಡು ಹೋಗಿದ್ದೆ ಆದರೆ ಆ ಬಗ್ಗೆ ಲಿಖಿತ ಅನುಮತಿ ಪಡೆದಿಲ್ಲ. ನಾನೇ ಎಂ.ಓ *3* ರಿಂದ *5* ಅನ್ನು ಈ ಪ್ರಕರಣಕ್ಕೊಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಬೇರೆ ಜನ ಬಂದಿಲ್ಲವಾದ್ದರಿಂದ ನಿ.ಪಿ–*2* ಮಹಜರ್ ಗೂ ಸಹ ಚಾ.ಸಾ–*2* ಮತ್ತು *3* ಅನ್ನು ಕರೆದಿದ್ದರು. ಪೋಲೀಸರು ಸ್ಥಳ ಮಹಜರ್ ಗೆ ಬರುವಂತೆ ಮಾತ್ರ ನನಗೆ ಲಿಖಿತ ನೋಟಿಸ್ ಕೊಟ್ಟಿದ್ದರು. ಬಟ್ಟೆ ಹಾಜರುಪಡಿಸಲು ಮೌಖಿಕವಾಗಿ ಹೇಳಿದ್ದರು ಆದರೆ ಲಿಖಿತವಾಗಿ ಕೊಟ್ಟಿರಲಿಲ್ಲ. ಸ್ಥಳ ಮಹಜರ್ ಗೆ ಬರುವಂತೆ ನೋಟಿಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆಸ್ತಿ ವಿಚಾರಕ್ಕೆ ದಯಾನಂದ ಮತ್ತು ಆರೋಪಿತನ ನಡುವೆ ವ್ಯಾಜ್ಯ ಇರುವ ಕಾರಣ ಘಟನೆ ನಡೆದ ಬಗ್ಗೆ ನನ್ನ ಮುಖಾಂತರ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಗೋಪಾಲಗೌಡ ಆಸ್ಪತ್ರೆಯಲ್ಲಿದ್ದಾಗ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು